**ಸಾಕ್ಷಿಯನ್ನು ದಿಃ 11.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 14 ಎಂದು, ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 15 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಗಾಯಾಳು ಅಪ್ರಾಪ್ತ ವಯಸ್ಕನು ಎಂದರೆ ಸರಿ. ಪ್ರಾಪ್ತ ವಯಸ್ಕರನ್ನು ಹೋಲೀಸಿಕೊಂಡಲ್ಲಿ ಅಪ್ರಾಪ್ತ ವಯಸ್ಕನಿಗೆ ಮೂಳೆ ಬೇಗ ಕೂಡಿಕೊಳ್ಳತ್ತದೆ ಎಂದರೆ ಸರಿ. ಗಾಯಾಳುವಿಗೆ ಮೂಳೆ ಕೊಡಿಕೊಂಡಿದ್ದು ಉಪಕರಣವನ್ನು ತೆಗೆದಿರುತ್ತೇನೆ. ಉಪಕರಣ ತೆಗೆದ ಒಂದು ತಿಂಗಳ ನಂತರ ಗಾಯಾಳು ತನ್ನ ದೈನಂದಿನ ಕೆಲಸ ಮಾಡಿಕೊಳ್ಳಬಹುದು. ಗಾಯಾಳುವಿಗೆ ಕೊನೆಯ ಬಾರಿ ಪರೀಕ್ಷಿಸಿದಾಗ ಅವರ ವಿದ್ಯಾಭ್ಯಾಸಕ್ಕೆ ತೊಂದರೆ ಆಗಿರುವುದು ಕಂಡು ಬಂದಿರುವುದಿಲ್ಲ. ಕೊನೆಯ ಬಾರಿ ಪರೀಕ್ಷಿಸಿದಾಗ ಗಾಯಾಳುವಿಗೆ ಇರುವ ತೊಂದರೆಯ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆದಿರುತ್ತೇನೆ. ಮೊಬಿಲಿಟಿ ಕಾಂಪೊನೆಂಟ್ ಗಳನ್ನು ಪರಿಗಣಿಸುವಾಗ ಮಜಲ್ ಸ್ಟ್ರೆಂತ್ ಮತ್ತು ಆರ್.ಓ.ಎಂ ಎರಡು ಸೇರಿ ಫಾರ್ಮುಲಾ ಬಳಸಿ ಪರಿಗಣಿಸಬೇಕು ಎಂದರೆ ಸರಿ. ಗಾಯಾಳುವಿನ ಮಜಲ್ ಸ್ಟ್ರೆಂತ್ ನಲ್ಲಿ ತೂಂದರೆ ಇರುವುದಿಲ್ಲ. ಗಾಯಾಳುವಿನ ಸ್ಟೇಬಿಲಿಟಿ ಕಾಂಪೊನೆಂಟ್ ಗಳಲ್ಲಿಯೂ ತೊಂದರೆ ಇರುವುದಿಲ್ಲ ಎಂದರೆ ಸರಿ. ಗಾಯಾಳುವಿನ ರೇಂಜ್ ಆಫ್ ಮೂಮೆಂಟ್ ನಲ್ಲಿ ಮಾತ್ರ ತೊಂದರೆ ಇರುತ್ತದೆ. ಗಾಯಾಳುವಿನ ಮೊಣಕಾಲಿನಲ್ಲಿ ತೊಂದರೆ ಇರುವುದಿಲ್ಲ. ಎರಡು ಮೂಳೆಗಳಲ್ಲಿ ತೊಂದರೆ ಇದ್ದಲ್ಲಿ ಒಂದೇ ಫಾರ್ಮುಲಾ ಬಳಸಿ ನ್ಯೂನತೆ ಪರಿಗಣಿಸಬೇಕು

ಎಂದರೆ ಸರಿ. ಮುಂದುವರೆದು ಸಾಕ್ಷಿಯು ಅದೇ ರೀತಿ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಒಂದೇ ಫಾರ್ಮುಲಾ ಬಳಸಿ ಕ್ಯಾಲ್ಕುಲೇಶನ್ ಮಾಡಿದರೆ 50% ನ್ಯೂನತೆ ಬರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು 60.5 % ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ಗೈಡ್ ಲೈನ್ ಪ್ರಕಾರ 50% ನ್ಯೂನತೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಹೆಚ್ಚಿನ ನ್ಯೂನತೆ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ಮಜಲ್ ಸ್ಟ್ರೆಂತ್, ಸ್ಟೆಬಿಲಿಟಿ ಕಾಂಪೊನೆಂಟ್ ಮತ್ತು ದೈನಂದಿನ ಕೆಸಗಳನ್ನು ಮಾಡಿಕೊಳ್ಳಲು ತೊಂದರೆ ಇರದೇ ಇರುವ ಕಾರಣ ಅವರ ಸಪಹಾಯ ಆಗಲಿ ಎಂದು ಹೆಚ್ಚು ನ್ಯೂನತೆ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನೋಟೀಫಿಕೇಶನ್ ಗೆ ವಿರುದ್ಧವಾಗಿ ನ್ಯೂನತೆ ಪರಿಗಣಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.